
# ನರ್ಮದಾ ತೀರದ ಪುಣ್ಯಕ್ಷೇತ್ರಗಳು

ಸ್ವಾಮಿ ಶಿವಕಾಂತಾನಂದ

'ನರ್ಮದಾ ತೀರದಲ್ಲಿ ಯೋಗಿಗಳು ವಾಸಮಾಡುತ್ತಾರೆ' ಎಂದ ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಪುರಾತನ ಕಾಲದಿಂದಲೇ ನರ್ಮದಾ ತೀರವು ಆಧ್ಯಾತ್ಮಿಕ ಸಾಧಕರ ತಾಣವಾಗಿದೆ. ಈ ಪುಣ್ಯನದಿಯ ತೀರದಲ್ಲಿ ಅಸಂಖ್ಯಾತ ತೀರ್ಥಕ್ಷೇತ್ರಗಳಿದ್ದು, ಅವು ಸಾಧಕರನ್ನು ತನ್ನೆಡೆಗೆ ಕೈಬೀಸಿ ಕರೆಯುತ್ತಿದೆ. ಈ ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಂಚಾಲಕರಾಗಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರು.




ಭಾರತೀಯ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಂಸ್ಕೃತಿಯ ಸೋಪಾನವಾಗಿ ನದಿಗಳು ಅತ್ಯಂತ ಮಹತ್ತರ ಪಾತ್ರವನ್ನು ವಹಿಸಿವೆ. ಕೇವಲ ಜೀವನಾಧಾರ ಪೋಷಣೆಯಾದ – ಕೃಷಿ, ಜಲ, ಕೈಗಾರಿಕೆ, ಉದ್ಯಮಗಳ ಆಧಾರದ ಹೊಣೆಯನ್ನಷ್ಟೇ ಅಲ್ಲದೆ, ಉನ್ನತ ಚಿಂತನೆಯ, ಆಂತರ್ಯದ ಆಳವನ್ನು ಹುಡುಕುವ, ಅಲೌಕಿಕ ಅನ್ವೇಷಣೆಯ ಪ್ರೇರಣೆಯನ್ನು ನೀಡುವ ಪಾವನ ಸ್ಥಳಗಳಾಗಿವೆ. ಹೆರಾಕ್ಲಿಟಸನು ಹೇಳುತ್ತಾನೆ. ' You cannot step into the same river twice.'(ನೀವು ಒಂದೇ ನದಿಯಲ್ಲಿ ಎರಡು ಬಾರಿ ಮುಳುಗಲಾರಿರಿ). ಇಂತಹ ತತ್ತ್ವಚಿಂತನೆಗೂ, ಜಿಜ್ಞಾಸೆಗೂ ಸಹ ಮನುಕುಲದ ನಾಗರಿಕತೆಯ ಬೆಳವಣಿಗೆಯು ಎಲ್ಲೆಲ್ಲಿ ಆಗಿದೆಯೋ, ಅಲ್ಲೆಲ್ಲಾ ಸ್ಫೂರ್ತಿಯ ಸೆಲೆಯಾಗಿದೆ. ಪ್ರತಿಕ್ಷಣವೂ ಬದಲಾಗುತ್ತಿರುವ, ಜಂಗಮ ರೂಪವಾದ ಜಗತ್ತಿನಲ್ಲಿ ಏಕತ್ತ್ವವನ್ನು ಶೋಧಿಸುವ ಬೋಧನೆಯನ್ನು ನೀಡುವ ವಸ್ತುವಾಗಿವೆ. ಹರಿಯುವಿಕೆಯು ನಿಂತಿರುವ ವಸ್ತುಗಳನ್ನು ನಿಂತಲ್ಲಿಯೇ ಬಿಟ್ಟು, ಹಳೆಯದನ್ನು ಕೊಡವಿ ಹೊಸತನವನ್ನು ಪಡೆಯುವ ಉತ್ಸಾಹ–ಆಶಯದಿಂದ ಮುನ್ನುಗುವಿಕೆಯ ಸಂದೇಶವನ್ನು ನೀಡುತ್ತದೆ. ಪ್ರತಿಕ್ಷಣವೂ ತಳ್ಳುತ್ತಾ ತಳ್ಳಿಸಿಕೊಳ್ಳುತ್ತಾ ಇದ್ದಾಗ ತನ್ನ ಅಲ್ಪತನವನ್ನು ತೊರೆದು ಎಲ್ಲರೂ ಮುಂದುವರಿಯಬಹುದೆಂಬ ಸಂದೇಶವನ್ನು ನೀಡುತ್ತದೆ. ಕೊನೆಗೆ ಅಲ್ಪತನದ ಅಹಂಕಾರವನ್ನು ತೊರೆದು ಸರ್ವಾತ್ಮಭಾವವನ್ನು ಹೊಂದುವ ಪ್ರತೀಕವಾಗಿ ಸಮುದ್ರವನ್ನು ಸೇರಿ ಅಲ್ಲಿಯೂ ಒಂದು ಸಂದೇಶವನ್ನು ಸಾರುತ್ತದೆ. ಈ ಪ್ರಕೃತಿದತ್ತವಾದ ವಿಶೇಷತೆಯಿಂದಲೇ ಭಾರತದ ನದೀತಟಗಳು ಸಿದ್ಧರು, ಋಷಿ ಮುನಿಗಳ ತಪಸ್ಸಿಗೆ ಪ್ರೇರಣೆಯಾಗಿ ಅನೇಕ ದೇವಸ್ಥಾನ, ಆಧ್ಯಾತ್ಮಿಕ, ಧಾರ್ಮಿಕ ಕೇಂದ್ರಗಳಿಗೆ ಆಸರೆಯಾಗಿದೆ. ಅಂತಹ ಸಪ್ತಮಹಾನದಿಗಳಲ್ಲಿ ಒಂದಾದ ನರ್ಮದಾ ನದಿ ತನ್ನದೇ ಆದ ಶ್ರೇಷ್ಠತೆ, ವಿಶೇಷತೆಯನ್ನು ಹೊಂದಿದೆ. ಗಂಗೆಯು ವಿಷ್ಣುವಿನ ಪಾದದಿಂದ ಉದ್ಭವಿಸಿದರೆ, ನರ್ಮದೆಯು ಶಿವನ ಶರೀರದಿಂದಲೇ ಉತ್ಪತ್ತಿಯಾಗಿ ಪ್ರತಿಯೊಂದು ಕಣವೂ ಶಿವನೇ ಎಂದು ಭಾವಿಸಲಾಗಿದೆ.

ನರ್ಮದಾ ಕೇ ಕಂಕರ್

ಸಬ್ ಶಿವ ಶಂಕರ್

ಅಷ್ಟೇ ಅಲ್ಲ ಗಂಗೆ ಯಮುನೆಗಿಂತಲೂ ಒಂದು ಕೈ ಹೆಚ್ಚು ಎಂಬಂತೆ ಸ್ತುತಿಸಲಾಗಿದೆ.

ತ್ರಿಭಿಃ ಸಾರಸ್ವತಂ ತೋಯಂ ಸಪ್ತಾಹೇನ ತು ಯಮುನಾ ।
ಸದ್ಯಃ ಪುನಾತಿ ಗಾಂಗೇಯಂ, ದರ್ಶನಾದೇವ ನರ್ಮದಾ ॥

'ಸರಸ್ವತಿ ನದಿಯಲ್ಲಿ ಮೂರು ಬಾರಿ, ಯಮುನಾ ನದಿಯಲ್ಲಿ ಒಂದು ವಾರ, ಗಂಗೆಯಲ್ಲಿ ಒಮ್ಮೆ ಸ್ನಾನ ಮಾಡಿದರೆ ಪಾಪ

ನಾಶವಾದರೆ, ನರ್ಮದಾ ದರ್ಶನ ಮಾತ್ರದಿಂದ ಆ ಫಲವು ಉಂಟಾಗುತ್ತದೆ. ನರ್ಮದೆಯ ದರ್ಶನ, ಪಾನ, ಸ್ನಾನ, ವಾಸದಿಂದ ಜೀವನ ಸಾಫಲ್ಯವಾಗುವುದರಲ್ಲಿ ಸಂಶಯವಿಲ್ಲ.'

ನರ್ಮದಾ ನದಿಯನ್ನು ರೇವಾ ಮತ್ತು ಮೇಖಲಕನ್ಯಕಾ ಎಂದೂ ಕರೆಯುತ್ತಾರೆ. ನರ್ಮದಾ ಉಗಮ ಮತ್ತು ಹರಿಯುವ ಸ್ಥಾನಗಳನ್ನು ರೇವಾಖಂಡ ಎಂದೂ ಕರೆಯುತ್ತಾರೆ. ನರ್ಮದೆಯು ಹರಿಯುತ್ತಿರುವ ಸಾಕ್ಷಾತ್ ಶಿವನಸ್ವರೂಪ. 'ರುದ್ರ ದೇಹಾತ್ ವಿನಿಃಸೃತಾ' ರುದ್ರನ ದೇಹದಿಂದ ಹರಿದವಳು. ನರ್ಮದಾ ತಟವು ಯೋಗ, ಭಕ್ತಿ ಮತ್ತು ಜ್ಞಾನ ಮಾರ್ಗಗಳ ಸಾಧನಾ ಸ್ಥಳ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ.'' Yogis live on the banks of Narmada - the best place for them because, the climate is very even.''

*(C.W.Vol.6, p.114)*

ಭೌಗೋಳಿಕವಾಗಿ ಈ ನದಿಯು ಸುಮಾರು ೧೩೧೨ ಕಿ.ಮೀ. ಉದ್ದ ಪಶ್ಚಿಮವಾಹಿನಿಯಾಗಿ ಹರಿಯುತ್ತದೆ. ಉತ್ತರಕ್ಕೆ ವಿಂಧ್ಯ ಪರ್ವತ ಶ್ರೇಣಿ, ದಕ್ಷಿಣಕ್ಕೆ ಸತ್ಪುರ ಪರ್ವತದ ವಿಶಾಲ ಕಣಿವೆಯ ಮಧ್ಯೆ ಹರಿಯುತ್ತದೆ. ಇದು ಭಾರತದ ೫ನೆಯ ಅತಿ ದೊಡ್ಡ ನದಿ. ಕೇವಡಿಯಾ ಎಂಬ ಸ್ಥಳದಲ್ಲಿರುವ ಸರ್ದಾರ್ ಸರೋವರ್ ಅಣೆಕಟ್ಟು ದೇಶದ ಅತಿದೊಡ್ಡ ಅಣೆಕಟ್ಟು. ನರ್ಮದಾ ನದಿಯು ಹರಿಯುವಾಗ ಅನೇಕ ತೀರ್ಥ ಸ್ಥಾನಗಳನ್ನೂ, ಓಂಕಾರೇಶ್ವರ, ಮಂಡಲೇಶ್ವರ, ವ್ಯಾಸಭೇಟ್, ಕವೀರ್‌ವಾಡ್, ಧರಮ್‌ಪುರಿ ಎಂಬಲ್ಲಿ ದ್ವೀಪಗಳನ್ನು ನಿರ್ಮಿಸುತ್ತಾ, ಮನೋಹರವಾದ ಜಲಪಾತಗಳನ್ನುಂಟುಮಾಡುತ್ತಾ ಹರಿಯುತ್ತದೆ. ಈ ನದಿಯು ಕೃಷಿ, ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಗಳಿಗೂ ಆಸರೆಯನ್ನಿತ್ತು ಗಲ್ಫ್ ಆಫ್ ಖಂಬಟ್ (Gulf of Khambat) ಎಂಬಲ್ಲಿ ಸಮುದ್ರವನ್ನು ಸೇರುತ್ತದೆ. ಇದೊಂದು ನದಿಗೆ ಮಾತ್ರ ಪರಿಕ್ರಮ ಮಾಡುವ ಪರಿಪಾಠವಿದೆ.

ಸ್ಕಂದ ಪುರಾಣದಲ್ಲಿರುವ ರೇವಾಖಂಡವು ನರ್ಮದೆಯನ್ನು ರುದ್ರನ ಮಗಳೆಂದು ತಿಳಿಸುತ್ತದೆ. ಶಿವನು ಒಮ್ಮೆ ಪಾರ್ವತಿಯೊಡಗೂಡಿ ರಿಷಾ ಪರ್ವತದಲ್ಲಿ ತಪಸ್ಸು ಮಾಡುತ್ತಿರುವಾಗ ಅವನ ಮೈಬೆವರಿನಿಂದ ನೀರಿನ ಝರಿಯು ಉಂಟಾಗಿ ಅದರಿಂದ ಒಂದು ಸುಂದರವಾದ ದೇವತಾ ಕನ್ಯೆಯು ಉತ್ಪತ್ತಿಯಾಗಿ ಶಿವನನ್ನು ಪೂಜಿಸಿದಳು. ಹೀಗೆ ಅಯೋನಿಜೆಯಾಗಿ ಆ ಕನ್ಯೆಯು ಜನಿಸಿದಳು. ಇವಳ ಅಲೌಕಿಕ ಸೌಂದರ್ಯಕ್ಕೆ ಮರುಳಾಗಿ ದೇವತೆಗಳು ಇವಳ ಹಿಂದೆ ಅಲೆಯುತ್ತಿರುವಾಗ ಶಿವನು ''ಯಾರಲ್ಲಿ ಅತಿ ಹೆಚ್ಚಿನ ದಿವ್ಯಪ್ರಭೆಯಿದೆಯೋ ಅವರೇ ಇವಳನ್ನು ವರಿಸಲು ಅರ್ಹರಾಗುತ್ತಾರೆ'' ಎಂದು ತಿಳಿಸಿದನು. ಆಗ ಇವಳು ಅವರು ಯಾರಾದರೂ ಹತ್ತಿರ ಬರುತ್ತಲೇ ಅದೃಶ್ಯಳಾಗುತ್ತಿದ್ದಳು ಅಥವಾ ಬಹುರೂಪಿಯಾಗುತ್ತಿದ್ದಳು. ಕೊನೆಗೂ ಇವಳನ್ನು ಯಾರೂ ಹಿಡಿಯಲಾಗಲಿಲ್ಲ. ಶಿವನು ಇದನ್ನೆಲ್ಲಾ ಗಮನಿಸಿ ಅತ್ಯಂತ ಸೂಕ್ಷ್ಮವಾದ, ನವಿರಾದ ಮತ್ತು ಮುದ ನೀಡುವ ಅವಳ ಗಮನವನ್ನು ಆಹ್ಲಾದಿಸುತ್ತಾ ಅವಳನ್ನು ನರ್ಮದಾ ಎಂದು ಕರೆದನು. ಕೊನೆಗೆ ಅವಳು ಶಿವನ ಮುಂದೆಯೇ ನಿಂತು ಸ್ತಬ್ಧಳಾದಳು.

### ಅಮರ ಕಂಟಕ

ಮೈಕಾಲಾ ಪರ್ವತ ಶ್ರೇಣಿಯಲ್ಲಿರುವ ಅಮರಕಂಟಕವೆಂಬ ಸ್ಥಳವು ನರ್ಮದಾ ನದಿಯ ಉಗಮ ಸ್ಥಾನ. ಈ ಉಗಮ ಸ್ಥಾನದಲ್ಲಿ ನರ್ಮದಾಮಾತೆಯ ಮೂಲ ಮಂದಿರವಿದೆ. ಈ




ಪವಿತ್ರ ತೀರ್ಥಕ್ಷೇತ್ರಕ್ಕೆ ಹಲವಾರು ಪ್ರಕಾರಗಳ ಕ್ಷೇತ್ರಮಹಿಮೆಯಿದೆ. ಪದ್ಮಪುರಾಣ ಮತ್ತು ಸ್ಕಂದ ಪುರಾಣಗಳ ಪ್ರಕಾರ ಸತ್ಯಯುಗದಲ್ಲಿ ಬಲೀ ಎಂಬ ದೈತ್ಯನಿದ್ದ. ಅವನಿಗೆ ಬಾಣಾಸುರನೆಂಬ ಸಹಸ್ರಭುಜದ ಮಗನಿದ್ದನು. ಇವನು ತ್ರಿಪುರಗಳಿಗೆ ಒಡೆಯನಾಗಿದ್ದನು. ಶಿವನು ತನ್ನ ಬಾಣಗಳಿಂದ ಎರಡು ನಗರಗಳನ್ನೂ ಭಸ್ಮಮಾಡಿದನು. ಇನ್ನೊಂದು ನಗರವನ್ನೂ ಭಸ್ಮಮಾಡಲು ಉದ್ಯುಕ್ತನಾದಾಗ ನನ್ನ ಬಳಿ ಇರುವ ಬಾಣಲಿಂಗವು ನಾಶವಾಗಬಾರದೆಂದು ಪ್ರಾರ್ಥಿಸಿದನು. ಎರಡು ಸುಟ್ಟ ನಗರಗಳಲ್ಲಿ ಒಂದು ಶ್ರೀಶೈಲದಲ್ಲಿಯೂ ಇನ್ನೊಂದು ಅಮರಕಂಟಕದಲ್ಲಿಯೂ ಬಿದ್ದಿತು.

**ಏಕಂ ತು ಪತಿತಂ ತತ್ರ ಶ್ರೀಶೈಲಖಂಡಮುತ್ತರಮ್ ।**
**ದ್ವಿತೀಯಂ ಪತಿತಂ ರಾಜನ್ ಶೈಲೇಹ್ಯಮರಕಂಟಕೇ ॥**

*(ಸ್ಕಂದ. ೫.೨೮, ೧೦೮-೯, ಪದ್ಮ. ಆದಿ ೧೬, ೬೮)*

ಸಮುದ್ರಮಂಥನದ ಸಮಯದಲ್ಲಿ ಉತ್ಪತ್ತಿಯಾದ ಹಾಲಾಹಲ ವಿಷವನ್ನು ಕುಡಿದ ನಂತರ ಇಲ್ಲಿಗೇ ಬಂದು ಶಿವನು ತಪಸ್ಸಿಗೆ ಕುಳಿತನಂತೆ. ಪಾರ್ವತಿಯು ಕೊರಳನ್ನು ಹಿಡಿದು ವಿಷವು ದೇಹವನ್ನು ಪ್ರವೇಶಿಸದಂತೆ ಮಾಡಿದ ಪರಿಣಾಮ, ಅತಿಯಾದ ವಿಷದಿಂದ ನೀಲಕಂಠನ ಬೆವರು ಧಾರಾಕಾರವಾಗಿ ಸುರಿದು ಒಂದು ಸಣ್ಣ ಝರಿಯಾಯಿತು. ಆ ಬೆವರಿನಿಂದ ನರ್ಮದೆಯು ಕನ್ಯಾರೂಪದಲ್ಲಿ ಪ್ರಕಟಳಾದಳು. ನಂತರ ಅವಳು ೧೦,೦೦೦ ವರ್ಷ ತಪಸ್ಸು ಮಾಡಿ ಶಿವನಾಜ್ಞೆಯಂತೆ ನದಿಯಾಗಿ ಪಶ್ಚಿಮಾಭಿಮುಖವಾಗಿ ಹರಿಯತೊಡಗಿದಳು.

ಭಗೀರಥನ ಕಥೆಯನ್ನು ಹೋಲುವ ಪುರೂರವನ ಕಥೆಯಿದೆ. ಪುರೂರವನೆಂಬ ಚಂದ್ರವಂಶದ ರಾಜನಿದ್ದ. ಅವನು ಶಿವನನ್ನು ಕುರಿತು ಘನಘೋರ ತಪಸ್ಸು ಮಾಡಿದ. ಶಿವನು ಪ್ರಸನ್ನನಾಗಿ ನರ್ಮದೆಯನ್ನು ಪೃಥ್ವಿಯಲ್ಲಿ ಅವತರಿಸಲು ಆಜ್ಞೆಯನ್ನು ನೀಡಿದ. ಹಾಗೆಯೇ ಎಂಟು ಬೃಹತ್ ಪರ್ವತಗಳಿಗೆ ನರ್ಮದೆಯನ್ನು

ಧರಿಸಲು ಆಜ್ಞೆಯನ್ನು ನೀಡಿದ. ನಂತರ ಪ್ರಥಮವಾಗಿ ವಿಂಧ್ಯ ಪರ್ವತದ ಪುತ್ರನಾದ ಪರ್ಯಂಕ ಪರ್ವದಲ್ಲಿ ಕಾಲನ್ನಿಟ್ಟು ಅವಳು ಧರೆಗಿಳಿದಳು.

ಮಾರ್ಕಂಡೇಯನಿಗೂ ನರ್ಮದೆಗೂ ಅವಿನಾವಭಾವ ಸಂಬಂಧ ವಿದೆ. ನರ್ಮದಾ ದಕ್ಷಿಣತಟದಲ್ಲಿಯೇ ಅವನ ತಂದೆಯಾದ ಮೃಕಂಡುವಿನ ಆಶ್ರಮವಿತ್ತೆಂದು ಧರ್ಮರಾಜನಿಗೆ ತಿಳಿಸುತ್ತಾನೆ. ಎಲ್ಲ ತೀರ್ಥವನ್ನೂ ಬಿಟ್ಟು ಈ ತೀರ್ಥವನ್ನೇಕೆ ಆಯ್ದುಕೊಂಡೆ ಎಂದು ದ್ರೌಪದೀಸಮೇತನಾದ ಯುಧಿಷ್ಠಿರನು ಪ್ರಶ್ನಿಸಿದಾಗ ಮಾರ್ಕಂಡೇಯನು ಅನೇಕ ವಿಷಯಗಳನ್ನು ತಿಳಿಸುತ್ತಾನೆ.

ಅಮರ ಕಂಟಕದಲ್ಲಿ ನರ್ಮದಾ ಮಂದಿರವನ್ನು ಬಿಟ್ಟು ಸುತ್ತಮುತ್ತ ಅನೇಕ ತೀರ್ಥ ಮತ್ತು ದರ್ಶನ ಸ್ಥಾನಗಳಿವೆ. ೪ ಕಿ.ಮೀ. ದೂರದಲ್ಲಿ ಭೃಗುಋಷಿಯ ತಪೋಸ್ಥಳವಾದ 'ಭೃಗು ಕಮಂಡಲು' ಎಂಬ ಸ್ಥಳವಿದೆ. ಮುಖ್ಯಮಂದಿರದ ಒಂದು ಕಿ.ಮೀ. ದೂರದಲ್ಲಿ 'ಮಾಯಿ ಕಿ ಬಗಿಯಾ' ಎಂಬ ಉದ್ಯಾನವಿದೆ. ಇದನ್ನು 'ಚರಣೋದಕ ಕುಂಡ' ಎಂದೂ ಕರೆಯುತ್ತಾರೆ. ಬಾಲ್ಯಾವಸ್ಥೆಯಲ್ಲಿ ನರ್ಮದೆಯು ಶಿವಪೂಜೆಗೆ ಪುಷ್ಪಚಯನ ಮಾಡುತ್ತಾ ಸಖಿಯರೊಡನೆ ಆಟವಾಡುತ್ತಿದ್ದಳೆಂದು ಪ್ರತೀತಿ. ಸೋನ ಮತ್ತು ಭದ್ರಾ ಎಂಬ ಎರಡು ನದಿಗಳ ಉಗಮಸ್ಥಾನ 'ಸೋನ್‌ಮುಡಾ'. ಸೋನನು ಬ್ರಹ್ಮನ ಮಾನಸಪುತ್ರ. ಪಕ್ಕದಲ್ಲಿ ಭದ್ರಾನದಿಯ ಉಗಮ ಸ್ಥಾನವಿದೆ. ಇವೆರಡೂ ಪ್ರತ್ಯೇಕವಾಗಿ ಹರಿದು ಅನತಿ ದೂರದಲ್ಲಿಯೇ ಒಂದಾಗಿ ೩೦೦ ಮೀಟರ್‌ನ ಒಂದು ಸಣ್ಣ ಜಲಪಾತವನ್ನು ಉಂಟುಮಾಡಿ ನರ್ಮದಾ ನದಿಯನ್ನು ಸೇರುತ್ತವೆ. 'ದುರ್ಗಧಾರಾ' ಎಂಬ ಜಲಪಾತವು ಮುಖ್ಯಮಂದಿರದಿಂದ ೬ ಕಿ.ಮೀ. ದೂರದಲ್ಲಿದೆ. ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿ ಶಂಕರಾಚಾರ್ಯರು ಸ್ಥಾಪಿಸಿದರು ಎನ್ನಲಾದ ಪಾತಾಳೇಶ್ವರ ಮಂದಿರವಿದೆ. ನರ್ಮದಾ ಮಂದಿರದ ಸುಮಾರು ೬ ಕಿ.ಮೀ. ದೂರದಲ್ಲಿರುವ 'ಕಪಿಲಧಾರಾ' ಎಂಬ ಜಾಗದವರೆಗೂ ನದಿಯು ಹರಿದು ದೊಡ್ಡ ಜಲಪಾತದಿಂದ ಧುಮುಕಿ ಮುಂದುವರಿಯುತ್ತದೆ. ಈ ಸ್ಥಳದಲ್ಲಿ ಕಪಿಲಮುನಿಯು ನರ್ಮದೆಯನ್ನು ಅವರೋಧ ಮಾಡಲು ಪ್ರಯತ್ನಿಸಿ ವಿಫಲನಾದ. ನಂತರ ಅವನು ಅಲ್ಲಿಯೇ ತಪಸ್ಸು ಮಾಡಿದ ಸ್ಥಳ. ಇಲ್ಲಿಂದ ಸ್ವಲ್ಪ ದೂರದಲ್ಲಿಯೇ 'ದೂಧ್‌ಧಾರ' ಎಂಬ ಜಲಪಾತವಿದೆ. ಇದು ದೂರ್ವಾಸ ಮುನಿಯು ತಪಸ್ಸು ಮಾಡಿದ ಸ್ಥಳ. 'ಚಕ್ರತೀರ್ಥ'ವೆಂಬ ಕಪಿಲಧಾರೆಗೂ ೨ ಕಿ.ಮೀ. ಮುನ್ನ ಸಿಗುವ ಸ್ಥಾನದಲ್ಲಿ ಪುರಾಣ ಉಲ್ಲೇಖದಂತೆ ಇಲ್ಲಿ ವಿಷ್ಣುವು ಕಠೋರ ತಪಸ್ಸನ್ನು ಮಾಡಿ ಸುದರ್ಶನ ಚಕ್ರವನ್ನೂ ಪಡೆದನೆಂಬ ಪ್ರತೀತಿ ಇದೆ. ಮುಖ್ಯಮಂದಿರದ ೩ ಕಿ.ಮೀ. ದೂರದಲ್ಲಿ 'ಧುನಿಪಾನೀ' ಎಂಬ ಸ್ಥಳದಲ್ಲಿ ಹಿಂದೆ ಸತ್ಯಯುಗದಲ್ಲಿ ಅನೇಕ ಋಷಿಗಳು ಯಾಗ ಮತ್ತು ತಪಸ್ಸನ್ನೂ ಮಾಡಿದ ಸ್ಥಳ ಎಂಬ ಪ್ರತೀತಿ. 'ಭೃಗು ಕಮಂಡಲು' ಎಂಬ ಸ್ಥಳದಲ್ಲಿ ಭೃಗು ತಪಸ್ಸು ಮಾಡಿದನೆಂಬ ಪ್ರತೀತಿ ಇದೆ.

### ಅಮರ ಕಂಟಕದ ಆಶ್ರಮಗಳು

* **ಶ್ರೀ ಕಲ್ಯಾಣ ಸೇವಾಶ್ರಮ:** ಮಂದಿರದ ತುಸು ದೂರದಲ್ಲಿಯೇ ಬೃಹತ್ತಾದ ಈ ಆಶ್ರಮವಿದೆ. ಇಲ್ಲಿ ಕಲ್ಯಾಣದಾಸ್ ಜಿ ಎಂಬ ಸಂನ್ಯಾಸಿಗಳು ಅನೇಕ ವರ್ಷ ಇಲ್ಲಿದ್ದು ತಪಸ್ಸು ಮಾಡಿ ನಂತರ ಆಶ್ರಮವನ್ನು ನಿರ್ಮಾಣ ಮಾಡಿದ್ದಾರೆ. ಇಲ್ಲಿ ಬಂದ ಸಾಧು ಭಕ್ತಾದಿಗಳಿಗೆ ಅನ್ನ ವಸತಿಗಳ ಸೇವೆಯು ನಡೆಯುತ್ತಿದೆ. ಜೊತೆಗೆ ಸುತ್ತಮುತ್ತಲ ಗ್ರಾಮ ಮತ್ತು ಆದಿವಾಸಿ ಮಕ್ಕಳ ವಿದ್ಯಾಭ್ಯಾಸದ ಸವಲತ್ತಿಗಾಗಿ ಒಂದು ಖಾಸಗಿ ಶಾಲೆಯನ್ನು ನಡೆಸುತ್ತಿದ್ದಾರೆ.

* ಅಮರ ಕಂಟಕದಲ್ಲಿ **ಭಾರತ ಸೇವಾಶ್ರಮವೂ** ಇದೆ.

* **ಶ್ರಿರಾಮಕೃಷ್ಣ ಕುಟೀರ** – ಶ್ರೀರಾಮಕೃಷ್ಣ ಕುಟೀರವನ್ನು ಗ್ವಾಲಿಯರ್‌ನ ಪ್ರಸಿದ್ಧ ಸ್ವಾಮಿ ಆತ್ಮಾನಂದರು ೧೯೭೮ರಲ್ಲಿ ಆರಂಭಿಸಿದರು. ಇದನ್ನು ಸ್ವಾಮಿ ಗಂಭೀರಾನಂದರು ಉದ್ಘಾಟಿಸಿದರು. ಈ ಆಶ್ರಮ ಆರಂಭದಿಂದ ಸುತ್ತಮುತ್ತಲಿನ ಗ್ರಾಮ ಮತ್ತು ವನವಾಸಿ ಹಾಡಿಗಳಲ್ಲಿ ನಿರಂತರ ಸೇವೆಯನ್ನು ನಡೆಸುತ್ತಿದೆ. ಯಾತ್ರೆಗೆ ಬರುವ ಸಾಧು-ಭಕ್ತರಿಗೆ ಊಟ-ವಸತಿಗಳ ವ್ಯವಸ್ಥೆಯನ್ನೂ ಮಾಡುತ್ತಿದೆ. ಸ್ವಾಮಿ ವಿಶ್ವಾತ್ಮಾನಂದ (ಜಯರಾಂ ಮಹಾರಾಜ್) ಪ್ರೀತಿಯಿಂದ ಆಶ್ರಮ ಪ್ರಾರಂಭವಾದಾಗಿನಿಂದಲೂ ಅವಿರತವಾದ ಸೇವಾವ್ರತವನ್ನು ಮಾಡುತ್ತಿದ್ದಾರೆ.

## ಓಂಕಾರೇಶ್ವರ

**ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್ ।**
**ಉಜ್ಜಯಿನ್ಯಾಂ ಮಹಾಕಾಲಂ ಓಂಕಾರಮಮಲೇಶ್ವರಮ್ ॥ ೧ ॥**

**ಪರಲ್ಯಾಂ ವೈದ್ಯನಾಥಂ ಚ ಡಾಕಿನ್ಯಾಂ ಭೀಮಾಶಂಕರಮ್ ।**
**ಸೇತುಬಂಧೇ ತು ರಾಮೇಶಂ ನಾಗೇಶಂ ದಾರುಕಾವನೇ ॥ ೨ ॥**

**ವಾರಾಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀತಟೇ ।**
**ಹಿಮಾಲಯೇ ತು ಕೇದಾರಂ ಘುಶ್ಮೇಶಂ ಚ ಶಿವಾಲಯೇ ॥ ೩ ॥**

ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದಾದ ಪವಿತ್ರ ನರ್ಮದಾ ತೀರದಲ್ಲಿ ಅತಿ ಪ್ರಸಿದ್ಧವಾದ ಪಾವನ ತೀರ್ಥಗಳಲ್ಲಿ ಒಂದು ಓಂಕಾರೇಶ್ವರ. ಮಾಂಧಾತಾ ಪರ್ವತ ಶ್ರೇಣಿಯಲ್ಲಿರುವ ಶಿವಪುರಿಯ ದ್ವೀಪದಲ್ಲಿ ನರ್ಮದಾ ತಟದಲ್ಲಿಯೇ ಶಿವಾಲಯವಿದೆ. ಓಂಕಾರೇಶ್ವರ ಪರ್ವತವು ಮೇಲಿನಿಂದ ನೋಡಿದಲ್ಲಿ ಓಂಕಾರಾಕಾರದಲ್ಲಿರುವ ದ್ವೀಪ ಪರ್ವತದಂತೆ ಕಾಣುತ್ತದೆ. ಸಾಕ್ಷಾತ್ ಬ್ರಹ್ಮನೇ ಓಂಕಾರಾಕಾರದ ಪರ್ವತವಾಗಿ ಶಿವನನ್ನು ಹೊರಲು ಕುಳಿತಿದ್ದಾನೆ ಎಂಬ ಪ್ರತೀತಿ. ಈ ಪರ್ವತಕ್ಕೆ ಸುಮಾರು ಎಂಟು ಕಿ.ಮೀ. ಪರಿಕ್ರಮ ಮಾರ್ಗವೂ ಬೆಟ್ಟದಲ್ಲಿಯೇ ಇದೆ. ನರ್ಮದೆಯ ದಕ್ಷಿಣ ಸ್ರೋತದ ಒಂದೆಡೆ ಓಂಕಾರೇಶ್ವರ ಮಂದಿರ ಇನ್ನೊಂದು ಪಾರ್ಶ್ವದಲ್ಲಿ ಪುರಾತನವಾದ ಮಮಲೇಶ್ವರ ಮಂದಿರ. ಈ ಎರಡೂ ಮಂದಿರದ ಶಿವಲಿಂಗಗಳನ್ನು ಒಂದು ಜ್ಯೋತಿರ್ಲಿಂಗವಾಗಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಉತ್ತರ ಸ್ರೋತದಲ್ಲಿ ಕಾವೇರಿ ನದಿಯು ನರ್ಮದೆ ನದಿಯನ್ನು ಕೂಡುತ್ತದೆ. ಹೀಗಾಗಿ ಇದು ಸಂಗಮ ಸ್ಥಾನವೂ ಹೌದು. ಈ ದ್ವೀಪವನ್ನು ವೈಢೂರ್ಯಮಣಿದ್ವೀಪವೆಂದೂ ಕರೆಯುತ್ತಾರೆ. ಪುರಾಣದ ಕಥೆಗಳಂತೆ ಇಕ್ಷ್ವಾಕು ವಂಶದ ಸೂರ್ಯವಂಶದ ಮಾಂಧಾತ ರಾಜನು ಇಲ್ಲಿ ಶಿವನನ್ನು ಕುರಿತು ಘೋರ

ತಪಸ್ಸನ್ನು ಮಾಡಿ ಒಲಿಸಿಕೊಂಡನು. ಇವನ ಪುತ್ರರಾದ ಅಂಬರೀಶ ಮತ್ತು ಮುಚುಕುಂದರು ಸಹ ಇಲ್ಲಿ ಅನೇಕ ವರ್ಷ ತಪಸ್ಸು ಮಾಡಿ ಶಿವನನ್ನು ಸಾಕ್ಷಾತ್ಕರಿಸಿಕೊಂಡರು.

* ವಿಂಧ್ಯಪರ್ವತಗಳ ಒಡೆಯನಾದ ವಿಂಧ್ಯರಾಜನು ಸಹ ತನ್ನ ಪಾಪವನ್ನು ಹೋಗಲಾಡಿಸಿಕೊಳ್ಳಲು ಮಣ್ಣಿನಲ್ಲಿ ಶಿವಲಿಂಗ ಸ್ಥಾಪಿಸಿ ತಪಸ್ಸು ಮಾಡಿದಾಗ ಪ್ರಸನ್ನನಾಗಿ ಓಂಕಾರೇಶ್ವರ ಮತ್ತು ಅಮಲೇಶ್ವರ ಎಂಬ ಎರಡೂ ರೂಪದಲ್ಲಿ ಪ್ರಕಟನಾದನು.

* ಈ ಓಂಕಾರೇಶ್ವರ ಪರ್ವತಕ್ಕೆ ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಅಖಂಡಾನಂದರು, ಸ್ವಾಮಿ ತುರೀಯಾನಂದರು ಮತ್ತು ಸ್ವಾಮಿ ಶಿವಾನಂದರು ಬಂದು ಇಲ್ಲಿದ್ದು ತಪಗೈದು ಈ ತೀರ್ಥಸ್ಥಾನವನ್ನು ಇನ್ನಷ್ಟು ಪವಿತ್ರಗೊಳಿಸಿದ್ದಾರೆ.

ಓಂಕಾರೇಶ್ವರ ಮಂದಿರದ ಕೆಳಗೆ ನದೀತಟದಲ್ಲಿ ಗೋವಿಂದ ಭಗವತ್ಪಾದರ ಗುಹೆಯಿದೆ. ಮಾಧವೀಯ ಶಂಕರವಿಜಯದ ಪ್ರಕಾರ ಶಂಕರಾಚಾರ್ಯರು ಇಲ್ಲಿಯೇ ತಮ್ಮ ಗುರುಗಳನ್ನು ಭೇಟಿಯಾಗಿ ಸಂನ್ಯಾಸ ಸ್ವೀಕರಿಸಿದರು. ಶಂಕರರು ಬರುವ ಹೊತ್ತಿಗೆ ನರ್ಮದೆಯು ಉಕ್ಕಿ ಹರಿಯುತ್ತಿದ್ದಾಗ ನೆರೆ ಬಂದು ನೀರು ಗುಹೆಯೊಳಗೂ ನುಗ್ಗಿತು. ಗೋವಿಂದ ಭಗವತ್ಪಾದರೂ ಸಹ ಅದರಲ್ಲಿ ಮುಳುಗಿ ಹೋಗಿದ್ದಾಗ  ಅಲ್ಲಿರುವ ಶಿಷ್ಯರು ಕಂಗಾಲಾಗಿದ್ದರು. ಶಂಕರರು ತಕ್ಷಣ ತಮ್ಮ ಕಮಂಡಲುವಿನಲ್ಲಿ ನರ್ಮದೆಯ ನೆರೆಯನ್ನು ನಿಗ್ರಹಿಸಿದರು. ಗುರು ಗೋವಿಂದ ಭಗವತ್ಪಾದರು ಶ್ರೀಶಂಕರರನ್ನು ಪರೀಕ್ಷಿಸಲೋಸುಗವೇ ಈ ಲೀಲೆಯನ್ನು ನಡೆಸಿದರು. ಶಿಷ್ಯನನ್ನು ಸ್ವೀಕರಿಸಿ, ಸಂನ್ಯಾಸವನ್ನಿತ್ತು ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆಯಲು ಆದೇಶಿಸಿದರು. ಶಂಕರಾಚಾರ್ಯರು ಇಲ್ಲಿಯೇ ನರ್ಮದಾಷ್ಟಕವನ್ನು ರಚಿಸಿದರು.

### ಆಶ್ರಮಗಳು

**ಮಾರ್ಕಂಡೇಯ ಆಶ್ರಮ:** ಪ್ರಸಿದ್ಧ ಸ್ವಾಮಿ ರಾಮಾನಂದ ಸರಸ್ವತಿಯವರು ಸ್ಥಾಪಿಸಿರುವ ಈ ಆಶ್ರಮವು ಸಂನ್ಯಾಸಿ ಮತ್ತು ಭಕ್ತವೃಂದಕ್ಕೆ ಆಶ್ರಯ ಸ್ಥಾನವೂ, ಶಾಸ್ತ್ರ-ಉಪನಿಷತ್ತುಗಳ ಅವಿರತ ಪ್ರವಚನಗಳನ್ನು ನೀಡುವ ಆಶ್ರಮವೂ ಆಗಿದೆ. ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಸಂಘದೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದು ಅನೇಕ ಶಾಖೆಗಳಲ್ಲಿ ಹಲವು ಬಾರಿ ಉಪನಿಷತ್ತಿನ ತರಗತಿಗಳನ್ನು ನೀಡುತ್ತಿದ್ದರು. ಇವರ ಹಿಂದಿ ಭಾಷ್ಯ ತರಗತಿಯ ಧ್ವನಿಮುದ್ರಿಕೆಗಳು ಸಾಧಕರಿಗೆ ಅತ್ಯಂತ ಉಪಯುಕ್ತವಾಗಿವೆ.

**ರಾಮಕೃಷ್ಣ ಮಿಷನ್ ಸಾಧನಾಕುಟೀರ, ಸಫೇದ್‌ಕುಟಿಯಾ :** ಓಂಕಾರೇಶ್ವರ ಪರ್ವತದಲ್ಲಿಯೇ ಪರಿಕ್ರಮ ಮಾರ್ಗದಲ್ಲಿರುವ ಈ ಕುಟೀರವು ಇಂದೋರ್ ಶಾಖೆಯ ಅಂಗವಾಗಿದೆ. ಸಾಧು, ಭಕ್ತರಿಗೆ ಊಟ ವಸತಿ ಸೌಕರ್ಯವನ್ನೂ ಇಲ್ಲಿ ಕಲ್ಪಿಸಲಾಗಿದೆ. 'ಗದಾಧರ ಅಭ್ಯುದಯ ಪ್ರಕಲ್ಪ' ಮುಂತಾದ ಕೆಲವು ಸೇವಾಕಾರ್ಯಗಳೂ ಇಲ್ಲಿ ಅಲ್ಪ ಪ್ರಮಾಣದಲ್ಲಿ ನಡೆಯುತ್ತವೆ.

### ನರ್ಮದಾ ಪರಿಕ್ರಮ

ಮಾರ್ಕಂಡೇಯ ಮುನಿಯೂ ಸಹ ಪರಿಕ್ರಮವನ್ನು ಮಾಡಿದನೆಂದು ಹೇಳಲಾಗಿದೆ. ಸುಮಾರು ೨೮೫೬ ಕಿ.ಮೀ. ಕಾಲ್ನಡಿಗೆಯಲ್ಲಿ ಮಾಡುವ ಪರಿಕ್ರಮ, ಅತ್ಯಂತ ದೀರ್ಘವಾಗಿದೆ. ನದಿಗಳಲ್ಲಿ ಕೇವಲ ನರ್ಮದಾ ನದಿಗೆ ಮಾತ್ರ ಈ ಪರಿಕ್ರಮ ವಿಧಿ ಇದೆ. ಈ ಒಂದು ವ್ರತವನ್ನು ಸಂನ್ಯಾಸಿಗಳು ಮತ್ತು ಭಕ್ತರು ಅತ್ಯಂತ ಶ್ರದ್ಧೆಯಿಂದ, ನೂರಾರು ವರ್ಷದಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇದನ್ನು ೩ ವರ್ಷ ೩ ತಿಂಗಳು ೧೩ ದಿವಸ ಮಾಡಬೇಕೆಂಬ ನಿಯಮವಿದೆ. ಪರಿಕ್ರಮವನ್ನು ಅಮರಕಂಟಕ ಅಥವಾ ಓಂಕಾರೇಶ್ವರದಿಂದ ಆರಂಭಿಸಿ ಮತ್ತೆ ಅಲ್ಲಿಯೇ ಬಂದು ಪೂರೈಸಬೇಕು. ನರ್ಮದಾ ನದಿ ಪೂಜೆ, ಕನ್ಯಾಪೂಜೆ ಮಾಡಿದ ನಂತರ ಆರಂಭಿಸುವ ನಿಯಮ. ಪರಿಕ್ರಮ ಸಮಯದಲ್ಲಿ ಸತ್ಯ,



ನರ್ಮದಾ ಪರಿಕ್ರಮ

ಬ್ರಹ್ಮಚರ್ಯ ಪಾಲನೆ ಮಾಡಬೇಕು. ಅನೇಕ ಋಷಿ ಮುನಿಗಳ ಕುಟೀರಗಳು ಆಶ್ರಮಗಳಿಂದ ಯುಕ್ತವಾದ ನರ್ಮದಾ ಪರಿಕ್ರಮವು ಅತ್ಯಂತ ಪಾವನವಾದ, ಪಾಪನಾಶಕವಾದ ಮತ್ತು ಆಧ್ಯಾತ್ಮಿಕ ಲಾಭವನ್ನು ನೀಡಿರುವ ಹಲವಾರು ನಿದರ್ಶನಗಳನ್ನು ನಾವು ಕೇಳುತ್ತಿರುತ್ತೇವೆ.

ಹೀಗೆ ಸಕಲ ರೀತಿಯಲ್ಲಿಯೂ ಸಂಪೂರ್ಣವಾದ ನರ್ಮದಾ ನದಿಯ ಮತ್ತು ಅಲ್ಲಿರುವ ತೀರ್ಥಸ್ಥಾನಗಳು ಭಕ್ತ, ಸಾಧಕ, ಸಿದ್ಧರಿಗೆ ಅತ್ಯಂತ ಪ್ರಿಯವಾದ ಮತ್ತೆ ಮತ್ತೆ ಸೆಳೆಯುವ ಆಧ್ಯಾತ್ಮಿಕ ನೆಲೆಯಾಗಿ, ಅನೇಕ ಜೀವಿಗಳ ನೆಮ್ಮದಿ, ಸಾರ್ಥಕತೆ ಮತ್ತು ಭಗವತ್ ಸಾಫಲ್ಯದ ಸ್ರೋತವಾಗಿದೆ.